## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ1774/2024**

**ಸಾಕ್ಷಿಃ ಸಿಡಬ್ಲ್ಯೂಃ1, ಪಿ.ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರನ ಹೆಸರು | : ಶಿವಾನಂದ |
| ತಂದೆಯ ಹೆಸರು | : ಕಲ್ಲಪ್ಪ ನವದಗಿ |
| ವಯಸ್ಸು | : 38 ವರ್ಷ |
| ಉದ್ಯೋಗ | : ಪೋಲೀಸ್ ಉಪ ನಿರೀಕ್ಷಕರು , ದಾಂಡೇಲಿ ಗ್ರಾಮೀಣ ಠಾಣೆ |
| ವಾಸ್ತವ್ಯ | : ದಾಂಡೇಲಿ . |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ06/03/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿಃ 15.06.2023 ರಿಂದ 27.11.2024 ರವರೆಗೆ ಭಟ್ಕಳ ಶಹರ ಪೊಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿ.15.06.2024 ರಂದು ನಾನು ಮತ್ತು ಚಾಸಾ 4 ರವರು ರಾತ್ರಿ ಕರ್ತವ್ಯದಲ್ಲಿದ್ದಾಗ ನಂತರ 16.06.2024 ರ ಬೆಳಿಗ್ಗೆ 3.00 ಗಂಟೆಗೆ ಬಾತ್ಮಿದಾರರಿಂದ ಮಾಹಿತಿ ಬಂದಂತೆ ರಾತ್ರಿ ಕರ್ತವ್ಯದಲ್ಲಿದ್ದ ಚಾಸಾ 4, ಮತ್ತು 6 ಸಿಬ್ಬಂದಿಗಳನ್ನು ಕರೆದುಕೊಂಡು ಗುನ್ನಾ ಸ್ಥಳಕ್ಕೆ ಹೋಗಿದ್ದು ಅಲ್ಲಿ ತೆಂಗಿನ ಗುಂಡಿ ಕ್ರಾಸ್ ಕಡೆಯಿಂದ ಶಮಸುದ್ದೀನ್ ಸರ್ಕಲ ಕಡೆಗೆ ಒಂದು ಟಾಟ ಎಸಿ ಯಲ್ಲಿ ಹೋರಿಯನ್ನು ತುಂಬಿಕೊಂಡು ಬರಬಹುದು ಎಂದು ಮಾಹಿತಿ ಬಂದಿರುತ್ತದೆ . ಸದರಿ ವಿಷಯವನ್ನು ಮೇಲಾದಿಕಾರಿಗಳಿಗೆ ತಿಳಿಸಿ ಭಟ್ಕಳ ಶಹರ ಜಾಲಿ ಕ್ರಾಸ್ ಹತ್ತಿರ ವಾಹನ ತಪಾಸಣೆ ಮಾಡುವಾಗ ಸಮಯ 3.30 ಗಂಟೆಗೆ ಒಂದು ಟಾಟಾ ಎಸಿ ವಾಹನ ಬಂದಿರುತ್ತದೆ. ಅದನ್ನು ಪರಿಶೀಲನೆ ಮಾಡಲು ನಿಲ್ಲಿಸಿದಾಗ ಆತನು ಸ್ವಲ್ಪ ದೂರ ಹೋಗಿ ವಾಹನ ನಿಲ್ಲಿಸಿರುತ್ತಾನೆ. ಆಗ ನಾನು ಚಾಲಕನನ್ನು ಗಾಡಿಯಲ್ಲಿ ಏನು ಇದೆ ಎಂದು ಕೇಳಿದಾಗ ಹೋರಿ ಇದೆ ಎಂದು ಆತ ಹೇಳಿದ್ದು ಆಗ ನಾವು ಗಾಡಿಯನ್ನು ನೋಡಿದಾಗ ಹೋರಿಯನ್ನು ಹಿಂಸಾತ್ಮಕವಾಗಿ ಕಟ್ಟಿದ್ದು ಕಂಡುಬಂದಿರುತ್ತದೆ. ಆ ಬಗ್ಗೆ ಪಾಸ್ ಯಾ ಪರಿಮೀಟು ಕೇಳಿದಾಗ ಇಲ್ಲವೆಂದು ಹೇಳಿರುತ್ತಾನೆ. ಕಾನೂನು ಸುವ್ಯವಸ್ಥೆಗೆ ದಕ್ಕೆ ಆಗುವ ಕಾರಣ ವಾಹನ ಹಾಗೂ ಹೋರಿ ಸಮೇತ ಠಾಣೆಗೆ ತಂದು ಇಬ್ಬರು ಪಂಚರರಾದ ಚಾಸಾ 2 ಮತ್ತು 3 ರವರನ್ನು ಠಾಣೆಗೆ ಬರಮಾಡಿ ಠಾಣೆಯ ಆವರಣದಲ್ಲಿ ಪಂಚರಿಗೆ ಮಾಹಿತಿ ತಿಳಿಸಿ ಪಂಚರಾಗಲು

ಒಪ್ಪಿದ್ದ ಕಾರಣ ಅವರ ಸಮಕ್ಷಮ ವಾಹನ ಮತ್ತು ಹೋರಿ ಪರಿಶೀಲನೆ ಮಾಡಿದಾಗ 1 ಕಪ್ಪು ಬಣ್ಣದ ಹೋರಿ ಅಂದಾಜು ಕಿಮ್ಮತ್ತು ರೂ. 15,000 ಇರಬಹುದು. ಅದಕ್ಕೆ ಹಿಂಸಾತ್ಮಕವಾಗಿ ಕಟ್ಟಿದ್ದ ಹಗ್ಗ ಅಂದಾಜು ಕಿಮ್ಮತ್ತು 0 ಆಗಬಹುದು, ಟಾಟಾ ಎಸಿ ನಂ ಕೆಎ 10 4268 ಅಥವಾ 6248 ಇರಬಹುದು . ಪರಿಶೀಲನೆ ಮಾಡಿದಾಗ ಹೋರಿಯ ಹಿಂದಿನ ಬಾಲ ಕಟ್ಟಾಗಿದ್ದು ಕಂಡುಬಂದಿರುತ್ತದೆ. ಪಂಚರ ಸಮಕ್ಷಮ ಎಲ್ಲವನ್ನು ಜಪ್ತು ಪಡಿಸಿಕೊಂಡಿರುತ್ತೇವೆ. ಚಾಸಾ 6 ರವರಿಂದ ಸ್ಥಳದಲ್ಲಿ ಪಂಚನಾಮೆ ಗಣಕೀಕೃತಗೊಳಿಸಿ ಬೆಳಿಗ್ಗೆ 4.15 ರಿಂದ 5.45 ಗಂಟೆಯವರೆಗೆ ಪಂಚನಾ ಿಮ ಮಾಡಿರುತ್ತೇವೆ. ಠಾಣೆಯ ಆವರಣದ ಪಶ್ಚಿಮಕ್ಕೆ ಠಾಣೆಯ ಕಟ್ಟಡ , ಪೂರ್ವ , ದಕ್ಷಿಣ, ಉತ್ತರಕ್ಕೆ ಖುಲ್ಲಾ ಜಾಗ ಇರುತ್ತದೆ . ನಂತರ ನಾನು ಸರಕಾರದ ಪರವಾಗಿ ದೂರು ನೀಡಿದ್ದು ಇರುತ್ತದೆ. ಪಂಚನಾಮೆ ಕಾಲಕ್ಕೆ ಪೊಟೋ ತೆಗೆಯಿಸಿದ್ದು ಇರುತ್ತದೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪೊಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ ಎಸ ವಕೀಲರಿಂದ,**

ನನಗೆ ಸದರಿ ಪ್ರಕರಣದ ಮಾಹಿತಿ ಬೆಳಿಗ್ಗೆ 3.00 ಗಂಟೆಗೆ ಬಂದಿರುತ್ತದೆ. ಆ ಕಾಲಕ್ಕೆ ನಾನು ಪೆಟ್ರೋಲಿನ್ ಕರ್ತವ್ಯದಲ್ಲಿ ಇದ್ದೇನು. ಗುನ್ಹಾ ಸ್ಥಳದಿಂದ ನಮ್ಮ ಠಾಣೆ ಅಂದಾಜು 3 ಕಿಮಿ ದೂರದಲ್ಲಿದೆ. ಘಟನೆಯ ಬಗ್ಗೆ ಮಾಹಿತಿ ಬಂದಾಗ ನಾನು ನಮ್ಮ ಮೇಲಾಧಿಕಾರಿಗಳಿಗೆ ಪೋನ್ ಮೂಲಕ ತಿಳಿಸಿದ್ದ ಕಾರಣ ಠಾಣೆಗೆ ತಿಳಿಸುವ ಅವಶ್ಯಕತೆ ಇಲ್ಲಾ. ಘಟನೆ ಬಗ್ಗೆ ಠಾಣೆಗೆ ತಿಳಿಸಿ ಡೈರಿಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ನಾವು ಪೆಟ್ರೋಲಿನ್ ಕರ್ತವ್ಯದಲ್ಲಿದ್ದಾಗ ಡೈರಿಯಲ್ಲಿ ನಮೂದು ಮಾಡುವ ಅವಶ್ಯಕತೆ ಇಲ್ಲವೆಂದು ಸಾಕ್ಷಿ ಉತ್ತರ ನೀಡಿರುತ್ತಾರೆ. ಕೇಸ್ ಡೈರಿಯನ್ನು ಬರೆಯಲು 24 ಗಂಟೆಯ ಕಾಲ ಒಬ್ಬ ಸಿಬ್ಬಂದಿಯನ್ನುನಾವು ನೇಮಿಸುತ್ತೇವೆ ಎಂದರೆ ಪ್ರತ್ಯೇಕವಾಗಿ ನೇಮಿಸುವುದಿಲ್ಲವೆಂದು ಉತ್ತರ ನೀಡಿರುತ್ತಾರೆ. ಕೇಸ್ ಡೈರಿ ಠಾಣೆಯಲ್ಲಿ ಎಸ ಹೆಚ ಒ ಕರ್ತವ್ಯದಲ್ಲಿದ್ದ ಸಿಬ್ಬಂದಿ ಬಳಿ ಇರುತ್ತದೆ. ಆರೋಪಿಯ ಬಳಿಯಿಂದ ಐಡಿ ಕಾರ್ಡ , ಲೈಸನ್ಸ ಅನ್ನು ನಾನು ಪಡೆದಿಲ್ಲಾ ತನಿಖಾಧಿಕಾರಿಗಳು ಪಡೆದಿರಬಹುದು. ರಾಷ್ಟ್ರೀಯ ಹೆದ್ದಾರಿಯ ಮೇಲೆ ಗುನ್ಹಾ ಸ್ಥಳ ಇದೆ. ಘಟನಾ ಕಾಲಕ್ಕೆ ಹೆದ್ದಾರಿಯ ಮೇಲೆ ವಾಹನ ಓಡಾಟ ಇರಲಿಲ್ಲ. ಘಟನೆಯ ಕಾಲಕ್ಕೆ ಸಾರ್ವಜನಿಕರು ಸೇರಿರಲಿಲ್ಲಾ. ಕಾನೂನು ಸುವ್ಯವಸ್ಥೆಗೆ ದಕ್ಕೆ ಆಗಬಹುದು ಎಂದು ಪಂಚನಾಮೆಯನ್ನು ಠಾಣೆಯ ಆವರಣದಲ್ಲಿ ಮಾಡಿರುತ್ತೇವೆ. ಕಾನೂನು ಸುವ್ಯವಸ್ಥೆಗೆ ದಕ್ಕೆ ಆಗಬಹುದು ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತಹ ಘಟನೆ ನಡೆದಿದ್ದೆ ಇಲ್ಲಾ ಆ ಕಾರಣ ಪಂಚನಾ ಿಮ ಮಾಡಿದ್ದೆ ಇಲ್ಲಾ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಪರಿಶೀಲನೆಯನ್ನು ನಾನು ಮಾಡಿರುವುದಿಲ್ಲ. ಜಪ್ತು ಪಂಚನಾ ಿಮ ನಾನು ಮಾಡುವ ಅವಶ್ಯಕತೆ ಇರುವುದಿಲ್ಲ. ಜಪ್ತು ಪಂಚನಾಮೆ ಮಾಡಿದ ಸ್ಥಳ ಗುನ್ನಾಸ್ಥಳ ಆಗಿಲ್ಲ. ಪಂಚರನ್ನು ಸಿಬ್ಬಂದಿಗಳು ಕರೆಯಿಸಿದ್ದರು. ಪಂಚರ ವಯಸ್ಸು 30 ರಿಂದ 35 ಆಗಬಹುದು. ಪಂಚರ ಮೇಲೆ ನಮ್ಮ ಠಾಣೆಯಲ್ಲಿ ಬೇರೆ ಪ್ರಕರಣ ದಾಖಲಾದ ಬಗ್ಗೆ ನನಗೆ ನೆನಪಿಲ್ಲ. ಜಾನುವಾರು ಕಳುವಾದ ಬಗ್ಗೆ ನಮ್ಮ ಠಾಣೆಯಲ್ಲಿ ದೂರು ದಾಖಲಾದ ಬಗ್ಗೆ ನೆನಪಿಲ್ಲ. ನಾನು ಠಾಣೆಗೆ ಬಂದ ಸಮಯದಲ್ಲಿ ಎಸ ಹೆಚ ಒ ಹಾಜರಿದ್ದರು. ಸದರಿ ಪ್ರಕರಣದ ಬಗ್ಗೆ ದೂರನ್ನು ನೀಡಿದ ತಕ್ಷಣವೇ ಜಪ್ತು ಮಾಡಿದ ವಾಹನ , ಹಗ್ಗ ಹಾಗೂ ಜಾನುವಾರುಗಳನ್ನು ಎಸ ಹೆಚ ಒ ರವರ ತಾಬಾಕ್ಕೆ ನೀಡಿರುತ್ತೇನೆ. ಪಂಚನಾಮೆಯು ತನಿಖೆಯ ಒಂದು ಭಾಗ ಆಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪಂಚನಾಮೆಯನ್ನು ನಾನೇ ಮಾಡಿದ್ದು ಇರುತ್ತದೆ ಆದರೆ ಗಣಕೀಕೃತವನ್ನು ಬೇರೆ ಸಿಬ್ಬಂದಿ ಮಾಡಿರುತ್ತಾರೆ. ಸದರಿ ಪ್ರಕರಣದಲ್ಲಿ ದೂರನ್ನು ದಾಖಲಿಸುವ ಮೊದಲೇ ಪಂಚನಾಮೆ ಮಾಡಲಾಗಿದೆ. ಜಾನುವಾರು ಹಾಗೂ ಆರೋಪಿತರನ್ನು ಠಾಣೆಯ ಆವರಣದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಠಾಣೆಯ ಒಳಗೆ ನಾನು ಪಂಚನಾಮೆಯ ಮೊದಲು ಹೋಗಿದ್ದು ಇರುವುದಿಲ್ಲ. ಪಂಚನಾಮೆಯ ಬೆರಳಚ್ಚು ಸ್ಥಳದಲ್ಲಿ ಮಾಡಲಾಗಿದೆ. ಪಂಚನಾಮೆಯನ್ನು ಸ್ಥಳದಲ್ಲಿ ಲ್ಯಾಪಟಾಪ್ ನಿಂದ ಗಣಕೀಕೃತಗೊಳಿಸಿ ಅಲ್ಲೇ ಪ್ರಿಂಟ್ ತೆಗೆಯಲಾಗಿದೆ. ಆದರೆ ಪ್ರಿಂಟರ್ ಪೊಟೋದಲ್ಲಿ ಕಂಡುಬಂದಿರುವುದಿಲ್ಲ. ಠಾಣೆಯಲ್ಲಿ ನಾನು ದೂರನ್ನು ಬೆರಳಚ್ಚು ಮಾಡಿಸಿರುತ್ತೇನೆ. ದೂರಿನಲ್ಲಿ ನಾನು ಠಾಣೆಯಲ್ಲಿ ದೂರನ್ನು ಬೆರಳಚ್ಚು ಮಾಡಿರುತ್ತೇನೆ ಎಂಬ ಬಗ್ಗೆ ಎಲ್ಲಿಯೂ ನಮೂದು ಇಲ್ಲಾ. ದೂರನ್ನು ಹಾಗೂ ಪಂಚನಾಮೆಯನ್ನುನಾನು ಸ್ಥಳದಲ್ಲಿ ಬೆರಳಚ್ಚು ಮಾಡಿಸಿಲ್ಲಾ ಹಾಗೂ ಪ್ರಿಂಟನ್ನು ತೆಗೆಯಿಸಿದ್ದು ಇಲ್ಲಾ ಎಂದರೆ ಸರಿಯಲ್ಲ. ಜಪ್ತು ಪಂಚನಾಮೆ ಕಾಲಕ್ಕೆ ಪಶು ವೈದ್ಯಾಧಿಕಾರಿ ಹಾಜರಿರಲಿಲ್ಲಾ. ಪಶು ವೈದ್ಯಾಧಿಕಾರಿಗಳು ಯಾವಾಗ ಬಂದು ಪರಿಶೀಲನೆ ಮಾಡಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ. ದೂರನ್ನು ನೀಡುವ ಮೊದಲು ನಾನು ಮೇಲಾಧಿಕಾರಿಗೆ ತಿಳಿಸಿರುತ್ತೇನೆ. ಮಾಹಿತಿ ನೀಡಲು ವಾಯರಲೆಸ್ ಮೂಲಕ ಅವಕಾಶ ಇದ್ದರೂ ಸಹ ನಾನು ಮಾಹಿತಿ ನೀಡಿಲ್ಲ ಎಂದರೆ ಗಸ್ತು ಕರ್ತವ್ಯದಲ್ಲಿದ್ದ ಸಿಬ್ಬಂದಿಗೆ ತಿಳಿಸಿರುತ್ತೇನೆ ಆದರೆ ಠಾಣೆಗೆ ತಿಳಿಸಿದ್ದು ಇಲ್ಲಾ. ನನಗೆ ಯಾವುದೇ ಮಾಹಿತಿ ಬರದ ಕಾರಣ ನಾನು ಠಾಣೆಯಲ್ಲಿ ತಿಳಿಸಿದ್ದು ಇಲ್ಲಾ ಎಂದರೆ ಸರಿಯಲ್ಲ. ಆದ್ದರಿಂದ ಕೇಸ್ ಡೈರಿಯಲ್ಲಿ ನಮೂದಿಲ್ಲಾ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣದಲ್ಲಿ ಅಮಾಯಕ ವ್ಯಕ್ತಿಯನ್ನು ಬಂಧಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣದಲ್ಲಿ ಯಾವುದೇ ಜಾನುವಾರು ಪತ್ತೆ ಆಗದಿದ್ದರೂ ಸಹ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾಹನದ ಮಾಲೀಕರು ಯಾರೆಂಬ ಬಗ್ಗೆ ನನಗೆ ಮಾಹಿತಿ ಇಲ್ಲಾ ಆದರೆ ತನಿಖಾಧಿಕಾರಿಗೆ ತಿಳಿದಿರುತ್ತದೆ. ಯಾವುದೇ ತನಿಖೆ ಮಾಡದೇ ಸುಳ್ಳು ಪ್ರಕರಣ

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದಲ್ಲಿ ದೊರೆತ ವಾಹನ ಉಪಯೋಗಿಸಿ ಸದರಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 4 ರಿಂದ 7, 9 ಮತ್ತು 10 ಎಲ್ಲರೂ ಠಾಣೆಯ ಸಿಬ್ಬಂದಿಗಳು ಆಗಿರುತ್ತಾರೆ. ಪ್ರತ್ಯಕ್ಷ ಸಾಕ್ಷಿದಾರರು ಇಲ್ಲದ ಕಾರಣ ಠಾಣೆಯ ಸಿಬ್ಬಂದಿಗಳನ್ನು ಉಪಯೋಗಿಸಿರುತ್ತೇನೆ ಎಂದರೆ ಸರಿಯಲ್ಲ. ಇಂದು ನ್ಯಾಯಾಲಯದಲ್ಲಿ ಜಪ್ತು ಮಾಡಿದ್ದ ಹಗ್ಗ ನೋಡಿದು್ದ ಇಲ್ಲಾ. ನಾನು ಮುಖ್ಯ ವಿಚಾರಣೆ ಕಾಲಕ್ಕೆ ಹೇಳಿದ್ದ ವಿಷಯ ಸುಳ್ಳು ಎಂದರೆ ಸರಿಯಲ್ಲ.

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**